# ಪಿಶಾಚಿಯ ಸವಕಲು ಅಸ್ತ್ರ



ಚಂದನಾವತಿ ಎಂಬ ರಾಜ್ಯವನ್ನು ಧೀವರ ಎಂಬ ತರುಣ ರಾಜಕುಮಾರ ಆಳುತ್ತಿದ್ದನು. ಅವನು ಉತ್ಸಾಹಿಯೂ, ಶೂರನೂ, ಸದಾ ಮುಗುಳುನಗೆಯಿಂದ ಕೂಡಿದ ಸುಂದರನೂ ಆದ ರಾಜಕುಮಾರನಾಗಿದ್ದನು. ಪ್ರಜೆಗಳ ಪ್ರೀತಿಪಾತ್ರನಾದ ಅವನು ತನ್ನ ಆಡಳಿತ ಕೌಶಲದಿಂದ ಚಂದನಾವತಿ ಸುಖ ಸಮೃದ್ಧಿಯಿಂದ ಕೂಡಿದ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗುವಂತೆ ಮಾಡಿದ್ದನು.

ಆದರೆ ಇದು ಪಕ್ಕದ ರಾಜ್ಯ ಕನಕಪುರದ ರಾಜ ಧುಂಡುಕನಿಗೆ ನುಂಗಲಾರದ ತುತ್ತಾಗಿತ್ತು. ಅವನ ರಾಜ್ಯದಲ್ಲಿ ಸುಖ ಶಾಂತಿ ಇರಲಿಲ್ಲ. ಜನರು ಕ್ಷೋಭೆಗೊಂಡಿದ್ದರು. ಧುಂಡುಕರಾಜ ಆಡಳಿತ ನಡೆಸುವುದರಲ್ಲಿ ವಿಫಲನಾಗಿದ್ದ. ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಅವನು ಸದಾ ಧೀವರಕುಮಾರನನ್ನು ಪ್ರಜೆಗಳ ಎದುರಿನಲ್ಲಿ ಹಳಿಯುತ್ತಿದ್ದ. ಚಂದನಾವತಿಯ ಮತ್ತು ರಾಜ ಧೀವರನ ಉತ್ಕರ್ಷ ಕಂಡು ಅಸೂಯೆಪಡುತ್ತಿದ್ದ. ಸಾಲದೆಂಬಂತೆ ಧುಂಡುಕನ ಮಗಳು ರಾಜಕುಮಾರಿ ಮೀನಾದೇವಿ ಧೀವರನನ್ನು ಪ್ರೇಮಿಸತೊಡಗಿದ್ದಳು. ಪರಮಸುಂದರಿಯಾದ ಅವಳನ್ನು ಧೀವರನಿಗೆ ಕೊಡಲು ಧುಂಡುಕನಿಗೆ ಸುತರಾಂ ಇಷ್ಟವಿರಲಿಲ್ಲ. ಅದಲ್ಲದೆ ಮೊದಲಿನಿಂದಲೂ ಧುಂಡುಕ ಧೀವರನನ್ನು ದ್ವೇಷಿಸುತ್ತಿದ್ದನಷ್ಟೆ.

ಧುಂಡುಕ ರಾಜಕುಮಾರ ಧೀವರನನ್ನು ಹೇಗೆ ನಾಶಮಾಡುವುದು ಎಂದು ಯೋಚಿಸತೊಡಗಿದ್ದ. ನೇರವಾಗಿ ಯುದ್ಧದಲ್ಲಿ ಜಯಿಸಲಿಕ್ಕಂತೂ ಸಾಧ್ಯವಿರಲಿಲ್ಲ. ಕುಟಿಲ ಮಾರ್ಗದಿಂದಲೇ ಅವನನನ್ನು ಹಣಿಯಬೇಕು ಎಂದು ಆತ ಆಲೋಚಿಸುತ್ತಿದ್ದ. ಅದೇ ಸಮಯದಲ್ಲಿ ಧುಂಡುಕನ ಮಿತ್ರನಾದ ಮಾಯಪದ ಎಂಬ ಪಿಶಾಚಿ ತನ್ನ ಉದ್ಯೋಗವನ್ನು ನಿಲ್ಲಿಸುವುದಾಗಿಯೂ, ತನ್ನ ಉಪಕರಣಗಳನ್ನು ಕಡಿಮೆ ಬೆಲೆಗೆ ಮಾರುವುದಾಗಿಯೂ ಪ್ರಕಟಿಸಿದ. ಅವನು ತನ್ನ ಉಪಕರಣಗಳಾದ ಸ್ವಾರ್ಥ, ಪ್ರತಿಷ್ಠೆ, ಇಂದ್ರಿಯಾಸಕ್ತಿ, ದ್ವೇಷ, ಕೋಪ, ದುರಾಶೆ, ಈರ್ಷ್ಯೆ, ಅಧಿಕಾರ, ವ್ಯಾಮೋಹ ಮೊದಲಾದವುಗಳನ್ನು ಆಕರ್ಷಕವಾಗಿ ಪ್ರದರ್ಶಿಸಿದ್ದ. ಇವುಗಳಲ್ಲಿ ಯಾವುದಾದರೂ ಉಪಕರಣ ತನ್ನ ಉಪಯೋಗಕ್ಕೆ ಬರಬಹುದೋ ಎಂದು ವಿಚಾರಮಾಡುತ್ತ ಧುಂಡುಕ ಪ್ರದರ್ಶನವನ್ನು ನೋಡುತ್ತ ಹೋಗುತ್ತಿದ್ದ. ಆಗ ಅಲ್ಲಿ ಅತ್ಯಂತ ಸವೆದುಹೋದ ಒಂದು ಉಪಕರಣವನ್ನು ಕಂಡ. ಆದರೆ ಅದು ಅಷ್ಟು ಸವೆದು ಹಾಳಾದಂತಿದ್ದರೂ ಅದನ್ನು ಮಾತ್ರ ಮಾಯಪದ ಪಿಶಾಚಿ ಕಡಿಮೆ ಬೆಲೆಗೆ ಮಾರಲು ಒಪ್ಪಲಿಲ್ಲ. ಅದಕ್ಕೆ ಅತ್ಯಂತ ದುಬಾರಿ ಬೆಲೆ ನಿಗದಿ ಮಾಡಿದ್ದ. ಅತ್ಯಂತ ಸವಕಲಾದ ಆ ಉಪಕರಣಕ್ಕೆ ಅಷ್ಟೊಂದು ಹೆಚ್ಚಿನ ಬೆಲೆ ನಿಗದಿ ಮಾಡಿದ್ದನ್ನು ಕಂಡು ಅಚ್ಚರಿಗೊಂಡ ಧುಂಡುಕ ರಾಜ ಪಿಶಾಚಿಯನ್ನು ಕೇಳಿದ 'ಸವಕಲಾದ ಇದು ಯಾವ ಉಪಕರಣ?'

ಪಿಶಾಚಿ ಮಾಯಾಪದ ಹೇಳಿದ 'ಇದು ಖಿನ್ನತೆ ಮತ್ತು ನಿರಾಶೆ'.

'ಇದಕ್ಕೆ ಇಷ್ಟೊಂದು ಹೆಚ್ಚಿಗೆ ಬೆಲೆಯೇಕೆ?' ಎಂದು ಧುಂಡುಕ ಪ್ರಶ್ನಿಸಿದ.

ಅದಕ್ಕೆ ಮಾಯಾಪದ 'ಇದು ಎಲ್ಲಕ್ಕಿಂದ ಹೆಚ್ಚು ಪ್ರಬಲವಾದ ಬ್ರಹ್ಮಾಸ್ತ್ರ. ನನ್ನ ಎಲ್ಲಾ ಅಸ್ತ್ರಗಳೂ ವಿಫಲವಾದಾಗ ಈ ಅಸ್ತ್ರ ಸಂಪೂರ್ಣ ಯಶಸ್ಸು ತಂದುಕೊಟ್ಟಿದೆ. ಇದನ್ನು ಪ್ರಯೋಗದ ಮೂಲಕ ನಾನು ಜಗತ್ತಿಗೆ ತೋರಿಸಿಕೊಟ್ಟಿದ್ದೇನೆ. ಇದನ್ನು ಪ್ರಯೋಗಿಸಿದರೆ ಸೋಲೇ ಇಲ್ಲ. ನಾನು ಮನುಷ್ಯನನ್ನು ಖಿನ್ನತೆ ಮತ್ತು ನಿರಾಶೆಗೆ ಒಳಗಾಗುವಂತೆ ಮಾಡಬಲ್ಲೆನಾದರೆ ಅವನನ್ನು ಬೇಕಾದಂತೆ ಕುಣಿಸಬಲ್ಲೆ. ಇದನ್ನು ಅಸಂಖ್ಯ ಜನರ ಮೇಲೆ ಪ್ರಯೋಗಿಸಿ ಗೆದ್ದಿದ್ದೇನೆ. ಇದರಿಂದಾಗಿಯೇ ಈ ಉಪಕರಣ ಅತಿ ಹೆಚ್ಚು ಸವೆದಿದೆ. ಉತ್ಸಾಹ ಮತ್ತು ಧೈರ್ಯ ಮನುಷ್ಯನನ್ನು ಎಂಥ ಕಷ್ಟಕಾಲದಲ್ಲೂ ರಕ್ಷಿಸುತ್ತದೆ. ಆದರೆ ಖಿನ್ನತೆ ಮತ್ತು ನಿರಾಶೆ ಎಂತಹ ಪರಾಕ್ರಮಿಯನ್ನೂ, ಉತ್ಸಾಹಶೀಲನನ್ನೂ ರಸಾತಳಕ್ಕೆ ತಳ್ಳಿಬಿಡುತ್ತದೆ' ಎಂದು ವಿವರಿಸಿದ.

ಇದನ್ನು ಕೇಳಿ ಧುಂಡುಕನಿಗೆ ಬಹಳ ಸಂತೋಷವಾಯಿತು. ತನ್ನ ಶತ್ರು ಧೀವರನನ್ನು ಸೋಲಿಸಲು ಈ ಉಪಕರಣವೇ ಅತ್ಯಂತ ಪ್ರಯೋಜನಕಾರಿ ಎಂದು ನಿರ್ಧರಿಸಿ, ಪಿಶಾಚಿ ಹೇಳಿದಷ್ಟು ಬೆಲೆಕೊಟ್ಟು ಆ ಉಪಕರಣವನ್ನು ಖರೀದಿಸಿದ. ಆಮೇಲೆ ಅದನ್ನು ಯಾರಿಗೂ ಗೊತ್ತಾಗದಂತೆ ರಾಜಕುಮಾರನ ಮೇಲೂ ರಾಜಪರಿವಾರದ ಮೇಲೂ ಪ್ರಯೋಗಿಸತೊಡಗಿದ. ರಾಜಕುಮಾರ ಧೀವರ ಮತ್ತು ಮೀನಾದೇವಿಯ ಪ್ರೇಮ ಶಿಖರಮಟ್ಟಕ್ಕೆ ತಲುಪುವಂತೆ ಮೊದಮೊದಲು ಅದಕ್ಕೆ ನೀರೆರೆದ. ಅನಂತರ ನಿಧಾನ ಅವಳನ್ನು ಧೀವರನಿಗೆ ಕೊಡುವುದಿಲ್ಲ ಎಂದು ಹೇಳಿಕಳಿಸಿದ. ಮೀನಾದೇವಿಯನ್ನು ವಿಶೇಷ ಅರಮನೆಯಲ್ಲಿ ಗೃಹಬಂಧನದಲ್ಲಿ ಇರಿಸಿದ. ಹೀಗೇ ತುಂಬದಿನ ಪ್ರಯತ್ನಮಾಡಿದ ಬಳಿಕ ರಾಜಕುಮಾರ ಧೀವರ ನಿರಾಶೆಗೆ ಒಳಗಾದ. ಖಿನ್ನತೆ ಅವನನ್ನು ಆವರಿಸಿತು. ತಾನು ಪ್ರೇಮಿಸುವ ಮೀನಾದೇವಿ ತನಗೆ ಸಿಗುವುದಿಲ್ಲ ಎಂದ ಮೇಲೆ ರಾಜ್ಯ, ಅರಮನೆ, ಧನ– ಕನಕ, ಸುಖ, ಆಳ್ವಿಕೆ ಇದೆಲ್ಲಾ ಯಾಕೆ ಬೇಕು ಎಂಬ ನಿರಾಶೆ ಅವನನ್ನು ಕಾಡತೊಡಗಿತು. ಪಿಶಾಚಿಯಿಂದ ಖರೀದಿಸಿದ ಸವಕಲು ಉಪಕರಣ ಖಿನ್ನತೆ ಮತ್ತು ನಿರಾಶೆಯನ್ನು ಧುಂಡುಕ ಸರಿಯಾದ ಸಮಯದಲ್ಲಿ ಬುದ್ಧಿವಂತಿಕೆಯಿಂದ ಪ್ರಯೋಗ ಮಾಡಿದ್ದ.

ಧೀವರನ ಆಪ್ತ ಸೇವಕನೊಬ್ಬನಿಗೆ ಲಂಚಕೊಟ್ಟು ಅವನನ್ನು ಒಳಗೆ ಹಾಕಿಕೊಂಡು ಋಣಾತ್ಮಕ ಚಿಂತನೆಯನ್ನೇ ಧೀವರನ ತಲೆಯಲ್ಲಿ ತುಂಬುವಂತೆ ನೋಡಿಕೊಂಡ. ಅದು ಧೀವರನ ಮೇಲೆ ಚೆನ್ನಾಗಿ ಕೆಲಸ ಮಾಡಿತು. ಅವನನ್ನು ಜೀವನದಿಂದ ವಿಮುಖನನ್ನಾಗಿಸಿತು. ಮೊದಲಾದರೆ ಯುದ್ಧದಲ್ಲಿ ಜಯಿಸಿ ಮೀನಾದೇವಿಯನ್ನು ಮದುವೆಯಾಗುವುದಾಗಿ ಧೀವರ ಹೇಳುತ್ತಿದ್ದ. ಆದರೆ ಈಗ ಅವನಿಗೆ ಯಾವುದೂ ಬೇಡವಾಗಿಬಿಟ್ಟಿತು. ರಾಜ್ಯಭಾರದಲ್ಲಿ ನಿರಾಸಕ್ತಿ ಮೂಡಿತು. ಆತ್ಮಹತ್ಯೆಯ ಯೋಚನೆಯೂ ಬಂತು. ಕೊನೆಗೆ ಅದೊಂದು ದಿನ ರಾಜಕುಮಾರ ಧೀವರ ಎಲ್ಲವನ್ನೂ ತೊರೆದು ದೇಶಾಂತರ ಹೋಗಿಬಿಟ್ಟ. ಎಲ್ಲಿಗೆ ಹೋದನೋ ಯಾರಿಗೂ ಗೊತ್ತಾಗಲಿಲ್ಲ.. ಅರಮನೆಯಲ್ಲಿ ಹಾಹಾಕಾರವೆದ್ದಿತು. ತಂದೆ– ತಾಯಿ, ಬಂಧು– ಬಳಗ ಮತ್ತು ಪುರಜನರು ಎಲ್ಲರೂ ಶೋಕಗ್ರಸ್ತರಾದರು. ಇದೇ ಸಮಯ ನೋಡಿ ಧುಂಡುಕ ರಾಜ ಚಂದನಾವತಿಯ ಮೇಲೆ ದಾಳಿ ಮಾಡಿ ಅದನ್ನು ಸುಲಭವಾಗಿ ವಶಪಡಿಸಿಕೊಂಡ. ಖಿನ್ನತೆ ಮತ್ತು ನಿರಾಶೆ ಜೀವನವನ್ನೇ ಸರ್ವನಾಶ ಮಾಡುತ್ತದೆ ಎಂಬುದು ಋಜುವಾತಾಯಿತು.

**–ವನರಾಗ ಶರ್ಮಾ**